ಅಸಲು ದಾವಾ ಸಂಖ್ಯೆ . 276 - 2014

ಪಿ.ಡಬ್ಲ್ಯೂ-2
ದಿಃ 06-02-2020
ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದ ಃ-

ನಾನು ಈ ಪ್ರಕರಣದಲ್ಲಿ ಸಾಕ್ಷಿ ಇದ್ದು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಪ್ರಮಾಣೀಕರಿಸಿ ನ್ಯಾಯಾಲಯಕ್ಕೆ ಹಾಜರು ಮಾಡಿದ್ದು ಅದರಲ್ಲಿನ ಎಲ್ಲಾ ಸಂಗತಿಗಳು ನನಗೆ ಓದಿ ತಿಳಿಸಿ ಹೇಳಿದ್ದು ಸತ್ಯದಿಂದ ಕೂಡಿದೆ ಹಾಗೂ ಈ ಪ್ರಮಾಣ ಪತ್ರ ವನ್ನುತಯಾರಿಸಲು ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ.

ಪಾಟೀ ಸವಾಲು 2 ನೇ ಪ್ರತಿವಾದಿ ಪರ ಶ್ರೀ ಡಿ ಆರ್ ಎಸ್ ವಕೀಲರಿಂದಃ-

ನಾನು ಪಿಯುಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ . ನನಗೆ ದಾವಾದ ವಿಚಾರಗಳು ಗೊತ್ತಿರುತ್ತದೆ . ನಾನು ಈ ದಾವೆಗೆ ಸಂಬಂಧಿಸಿದಂತೆ ಒಂದು ಹಳೆಯ ಕ್ರಯ ಪತ್ರ ವನ್ನು ನೋಡಿರುತ್ತೇನೆ. ದಾವಾ ಆಸ್ತಿಯ ಕಳಮ್ಮ ಕೋಂ ಹುಚ್ಚಮ್ಮ ರವರಿಂದ ವಾದಿಯವರಿಗೆ ಬಂದಿರುತ್ತದೆ . ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ . ದಾವಾ ಷಡ್ಯೂಲ್ ಎ ಐಟಂ ಆಸ್ತಿಯ ಚೆಕ್ಕುಬಂಧಿ ಪೂರ್ವ ಪರಿಬೇಲಿ, ಪಶ್ಚಿಮ ಪಿಡಬ್ಲ್ಯೂಡಿ ರಸ್ತೆ, ಉತ್ತರಕ್ಕೆ ಬಡಗಿ ಪರಮೇಶಪ್ಪ ರವರ ಜಾಗ , ದಕ್ಷಿಣಕ್ಕೆ ಗೋವಿಂದಪ್ಪ ರವರ ಜಾಗ .

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ನೀಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)
ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.